# ದಾವಣಗೆರೆ ವಿಶ್ವವಿದ್ಯಾನಿಲಯ

**ಕಾಲೇಜು ಅಭಿವೃದ್ಧಿ ಮಂಡಳಿ ಕಾರ್ಯಾಲಯ, ಶಿವಗಂಗೋತ್ರಿ ದಾವಣಗೆರೆ -577 002.**

☎: 08192-208309, E-mail: cdcdu2013@gmail.com

ಸಂಖ್ಯೆ: ದಾವಿವಿ/ಸಿಡಿಸಿ/ಸಂಯೋ/803(3384)/2017-18/ ದಿನಾಂಕ:01.09.2017

## ಪ್ರಕಟಣೆ

ವಿಷಯ : ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ 2018-19ನೇ ಶೈಕ್ಷಣಿಕ ಸಾಲಿನ ಹೊಸ ಕಾಲೇಜು/ ಕೋರ್ಸುಗಳನ್ನು ಪ್ರಾರಂಭಿಸಲು ಸಂಯೋಜನಾ ಅರ್ಜಿಗಳನ್ನು ಅಹ್ವಾನಿಸುವ ಬಗ್ಗೆ.

ಉಲ್ಲೇಖ : ಮಾನ್ಯ ಕುಲಪತಿಗಳವರ ಅನುಮೋದನೆ ದಿನಾಂಕ:02.08.2017.

ವಿಶ್ವವಿದ್ಯಾಲಯ ವ್ಯಾಪ್ತಿಯ ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ 2018-19ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಕಲಾ, ವಿಜ್ಞಾನ, ವಾಣಿಜ್ಯ, ಆಡಳಿತ ನಿರ್ವಹಣೆ, ಶಿಕ್ಷಣ ಮತ್ತು ದೈಹಿಕ ಶಿಕ್ಷಣ ಹಾಗೂ ಇನ್ನಾವುದೆ ಸಾಂಪ್ರದಾಯಿಕ ವಿಷಯಗಳಲ್ಲಿ ಪದವಿ ಕಾಲೇಜುಗಳನ್ನು ರಾಜ್ಯ ಸರ್ಕಾರದ/ ವಿಶ್ವವಿದ್ಯಾನಿಲಯದ ಅನುದಾನದ ಅಪೇಕ್ಷೆ ಇಲ್ಲದೆ ಪ್ರಾರಂಭಿಸಲು ಆರ್ಥಿಕ ಸಾಮರ್ಥ್ಯವುಳ್ಳ ನೋಂದಾಯಿತ ಸೊಸೈಟಿ/ ಸಾರ್ವಜನಿಕ ಟ್ರಸ್ಟ್/ಸಂಸ್ಥೆಗಳಿಂದ ನವೀನ ಸಂಯೋಜನೆಗಾಗಿ ಆನ್‌ಲೈನ್ / ಮ್ಯಾನ್ಯುಯಲ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅಲ್ಲದೆ, ಪ್ರಸ್ತುತ ವಿಶ್ವವಿದ್ಯಾನಿಲಯದ ಸಂಯೋಜನೆ ಹೊಂದಿರುವ ಕಾಲೇಜುಗಳು ತಮ್ಮ ಕಾಲೇಜುಗಳ ಮುಂದುವರಿಕೆ ಸಂಯೋಜನೆ/ ಶಾಶ್ವತ ಸಂಯೋಜನೆ/ ಶಾಶ್ವತ ಸಂಯೋಜನಾ ಪರಿಶೀಲನೆ/ ಶಾಶ್ವತ ಸಂಯೋಜನೆಯ ನವೀಕರಣ/ ಹೊಸ ಪದವಿ/ ಸ್ನಾತಕೋತ್ತರ ಪದವಿ ಕೋರ್ಸ್‌ಗಳಿಗೆ ನವೀನ ಸಂಯೋಜನೆ/ ಹೊಸ ಐಚ್ಛಿಕ ವಿಷಯ ಸಮೂಹ/ ಹೊಸ ಭಾಷಾ ವಿಷಯಗಳ ನವೀನ ಸಂಯೋಜನೆ/ ವಿದ್ಯಾರ್ಥಿ ಪ್ರಮಾಣದ ವಿಸ್ತರಣೆ ಮುಂತಾದವುಗಳಿಗೆ ಸಂಬಂಧಿಸಿದಂತೆ 2018-19ನೇ ಶೈಕ್ಷಣಿಕ ವರ್ಷಕ್ಕಾಗಿ ಸಂಯೋಜನಾ ಅರ್ಜಿಗಳನ್ನು ದ್ವಿಪ್ರತಿಯಲ್ಲಿ ಸಲ್ಲಿಸಬಹುದಾಗಿದೆ.

**ಸಂಯೋಜನಾ ಪ್ರಸ್ತಾವನೆಗಳ 2018-19ನೇ ಸಾಲಿನ ಅರ್ಜಿಗಳನ್ನು ಅನ್‌ಲೈನ್ ಮತ್ತು ಮ್ಯಾನ್ಯುಯಲ್ ಮೂಲಕ ಅರ್ಜಿ ಸಲ್ಲಿಸಬಹುದು.**

**ಸಂಯೋಜನೆಗೆ ಸಂಬಂಧಿಸಿದ ಇತರೆ ಮಾಹಿತಿಗಳು ಈ ಕೆಳಕಂಡಂತೆ ಇರುತ್ತವೆ.**

01. ಬಿ.ಎಡ್/ಬಿ.ಪಿ.ಎಡ್ ಅಥವಾ ಇತರೆ ವೃತ್ತಿಪರ ಕಾಲೇಜು ಪ್ರಾರಂಭಿಸಲು ಇಚ್ಛಿಸುವ ನೋಂದಾಯಿತ ಸಂಸ್ಥೆಗಳು, ಸಂಯೋಜನಾ ಅರ್ಜಿ ಸಲ್ಲಿಸುವ ಮೊದಲು, ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್ತಿನ (ಎನ್.ಸಿ.ಟಿ.ಇ) ಅಥವಾ ಸಂಬಂಧಿಸಿದ ಇತರೆ ಸಕ್ಷಮ ಪ್ರಾಧಿಕಾರಗಳ ಪೂರ್ವಾನುಮೋದನೆಯನ್ನು ಕಡ್ಡಾಯವಾಗಿ ಪಡೆದಿರಬೇಕು. ಹಾಗು ವಿಶ್ವವಿದ್ಯಾನಿಲಯದಿಂದ ನಿರಾಕ್ಷೇಪಣಾ ಪತ್ರವನ್ನು ಪಡೆದಿರಬೇಕು.

02. ಸಂಯೋಜಿತ ಕಾಲೇಜುಗಳು ಸಂಯೋಜನಾ ಅರ್ಜಿಯನ್ನು ಸಲ್ಲಿಸುವಾಗ ವಿಶ್ವವಿದ್ಯಾಲಯದ ಪರಿನಿಯಮಾವಳಿಯನ್ವಯ ಅನುಮೋದನೆಗೊಂಡಿರುವ ಪದವಿ ಕೋರ್ಸು/ವಿಷಯ/ಐಚ್ಛಿಕ ವಿಷಯಗಳಿಗೆ ಮಾತ್ರ ಅರ್ಜಿ ಸಲ್ಲಿಸತಕ್ಕದ್ದು.

03. ಐದು (05) ವರ್ಷಗಳ ನಿರಂತರ ತಾತ್ಕಾಲಿಕ ಸಂಯೋಜನೆಯನ್ನು ಪಡೆದಿರುವ ಕಾಲೇಜುಗಳು ಪ್ರಸ್ತುತ ಅಸ್ತಿತ್ವದಲ್ಲಿರುವ ಕೋರ್ಸು/ವಿಷಯಗಳಿಗೆ ಸ್ಥಳೀಯ ತಪಾಸಣಾ ಸಮಿತಿ ವಿಧಿಸಿರುವ ಷರತ್ತುಗಳನ್ನು ಸಂಪೂರ್ಣವಾಗಿ ಪಾಲಿಸಿ, ವಿಶ್ವವಿದ್ಯಾಲಯ ಮತ್ತು ಯುಜಿಸಿ-ಯಿಂದ ಕಾಲ-ಕಾಲಕ್ಕೆ ನಿಗದಿಪಡಿಸುವ

ಶೈಕ್ಷಣಿಕ ಗುಣಮಟ್ಟ ಹೊಂದಿದ್ದಲ್ಲಿ ಮತ್ತು ನ್ಯಾಕ್ ಸಂಸ್ಥೆಯ ಮಾನ್ಯತೆ (ಕನಿಷ್ಠ 'C' Grade) ಪಡೆದಿದ್ದಲ್ಲಿ ಅಂತಹ ಕಾಲೇಜುಗಳು ಶಾಶ್ವತ ಸಂಯೋಜನೆ ಮಂಜೂರಾತಿಗಾಗಿ ಅರ್ಜಿ ಸಲ್ಲಿಸಬಹುದು.

04. ಸ್ನಾತಕೋತ್ತರ ಪದವಿ ಕೋರ್ಸ್‌ಗಳನ್ನು ಪ್ರಾರಂಭಿಸಲು ಉದ್ದೇಶಿಸಿರುವ ಕಾಲೇಜುಗಳು ವಿಶ್ವವಿದ್ಯಾಲಯದಿಂದ ಶಾಶ್ವತ ಸಂಯೋಜನೆಯನ್ನು ಪಡೆದಿರಬೇಕು. ಹೊಸದಾಗಿ ಪ್ರಾರಂಭಿಸಲು ಉದ್ದೇಶಿಸಿರುವ ಸ್ನಾತಕೋತ್ತರ ಪದವಿ ಕೋರ್ಸಿಗೆ ಸಂಬಂಧಿಸಿದ ವಿಷಯದಲ್ಲಿ ಯು.ಜಿ.ಸಿ/ಸರ್ಕಾರಿ ನಿಯಮಾವಳಿಯನ್ವಯ ಕನಿಷ್ಠ ನಾಲ್ವರು ಅಧ್ಯಾಪಕರನ್ನು ಹೊಂದಿದ್ದು, ಅವರುಗಳಿಗೆ ಸ್ನಾತಕೋತ್ತರ ವಿಷಯ ಬೋಧನೆಗೆ ಆದೇಶ ನೀಡಿರಬೇಕು. ಅಲ್ಲದೆ, ಅವರಲ್ಲಿ ಇಬ್ಬರು Ph.D. ಪದವಿ ಹೊಂದಿದವರಾಗಿಬೇಕು. *ಸದರಿ ಅಧ್ಯಾಪಕರನ್ನು ಸ್ನಾತಕ ಪದವಿ ತರಗತಿಗಳಿಗೆ ಬೋಧನೆಗೆ ಅವಕಾಶ ನೀಡಿರಬಾರದು.* ಸ್ನಾತಕೋತ್ತರ ವ್ಯಾಸಂಗದ ಜೊತೆಗೆ ಸಂಶೋಧನಾ ಕಾರ್ಯಕ್ಕಾಗಿ ವಿಶ್ವವಿದ್ಯಾನಿಲಯ ಮತ್ತು ಸರ್ಕಾರದ ಮಾರ್ಗಸೂಚಿಯನ್ವಯ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಹೊಂದಿರಬೇಕು. ಅಂತಹ ಸೌಲಭ್ಯವುಳ್ಳ ಕಾಲೇಜುಗಳು 2018–19ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕೋತ್ತರ ಪದವಿ ಕೋರ್ಸ್‌ಗಳನ್ನು ಪ್ರಾರಂಭಿಸಲು ದ್ವಿಪ್ರತಿಯಲ್ಲಿ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

**05. ಹೊಸ ಕಾಲೇಜು ಪ್ರಾರಂಭಿಸಲು ನವೀನ ಸಂಯೋಜನೆಗಾಗಿ ಅರ್ಜಿ ಸಲ್ಲಿಸಲು ಇಚ್ಛಿಸುವ ನೋಂದಾಯಿತ ಸಂಘ ಸಂಸ್ಥೆಗಳು ಅರ್ಜಿಯೊಡನೆ ಈ ಕೆಳಕಂಡ ದಾಖಲಾತಿಗಳನ್ನು ತಪ್ಪದೆ ಲಗತ್ತಿಸತಕ್ಕದ್ದು.**

5.1. ವಿದ್ಯಾಸಂಸ್ಥೆಯ ನೋಂದಣಿ ಪತ್ರದ ದೃಢೀಕೃತ ಪ್ರತಿ.
5.2. ಮೆಮೊರಾಂಡಮ್ ಮತ್ತು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್, ರೂಲ್ಸ್, ರೆಗ್ಯುಲೇಶನ್ಸ್ ಮತ್ತು ಬೈಲಾ ಪ್ರತಿ.
5.3. ಟ್ರಸ್ಟ್ ಆಗಿದ್ದರೆ ಆ ಟ್ರಸ್ಟ್ ಡೀಡ್‌ನ ಒಂದು ಪ್ರತಿ ಹಾಗೂ ಸಂಬಂಧಪಟ್ಟ ಕಾಯಿದೆಯಡಿಯಲ್ಲಿ ನೋಂದಣಿಯಾಗಿರುವುದಕ್ಕೆ ದೃಢೀಕೃತ ಪ್ರತಿ ಮತ್ತು ಶೈಕ್ಷಣಿಕ ಉಪಯೋಗಕ್ಕೆ ಸಂಬಂಧಪಟ್ಟಂತೆ ಟ್ರಸ್ಟ್‌ನಲ್ಲಿ ತೆಗೆದುಕೊಂಡ ನಿರ್ಣಯದ ಪ್ರತಿ.
5.4. ಸೊಸೈಟಿ/ಟ್ರಸ್ಟ್ ಲೆಕ್ಕಗಳ ಆಡಿಟ್ ವರದಿಯ ಪ್ರತಿ. (ಕನಿಷ್ಠ ಕಳೆದ ಮೂರು ವರ್ಷಗಳದ್ದು)
5.5. ಕಾಲೇಜಿನ ಲೆಕ್ಕಗಳ ಆಡಿಟ್ ವರದಿ ಪ್ರತಿ.
5.6. ಹಿಂದಿನ ವರ್ಷದ ವಾರ್ಷಿಕ ವರದಿಯ ಪ್ರತಿ.
5.7. ಉದ್ದೇಶಿತ ಕಾಲೇಜಿನ ಸ್ಥಾಪನೆಗೆ ನಿಗದಿಪಡಿಸಿರುವ ಸ್ಥಳ ಮತ್ತು ಅದರ ಸೂಕ್ತತೆ ವಿವಾದ ಮುಕ್ತವಾಗಿರುವ ಬಗೆಗೆ ಅಫಿಡಾವಿಟ್ ಸಲ್ಲಿಸುವುದು.
5.8. ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಯವರು ಪೂರಕವಾಗಿ ಸಂಬಂಧಿಸಿದ ಇಲಾಖೆಯಿಂದ ಪಡೆದಿರುವ ಪ್ರಮಾಣಪತ್ರ.
5.9. ಕಾಲಕಾಲಕ್ಕೆ ರಚಿಸಿರುವ/ರಚಿಸಲಾಗುವ ವಿಶ್ವವಿದ್ಯಾಲಯದ ಅಧಿನಿಯಮ(Act) ಪರಿನಿಯಮ/ಶಾಸನ (Statute); ನಿಬಂಧನೆ (Regulations); ಆಧ್ಯಾದೇಶ (Ordinance); ನಿಯಮ (Rule) ಮತ್ತು ನಿರ್ದೇಶನಗಳಿಗೆ ಬದ್ಧರಾಗಿರುವುದಾಗಿ ತಿಳಿಸುವ ಅಫಿಡಾವಿಟ್ ಪತ್ರವನ್ನು (Undertaking) ರೂ.100=00 ಛಾಪ ಕಾಗದದಲ್ಲಿ ಮುದ್ರಿಸಿ ನೋಟರಿಯವರಿಂದ ದೃಢೀಕರಿಸಿ ಅರ್ಜಿಯೊಡನೆ ಲಗತ್ತಿಸುವುದು

06. ಸರ್ಕಾರಿ ಕಾಲೇಜುಗಳ ಪ್ರಾಂಶುಪಾಲರು, ಸರ್ಕಾರದ ಪೂರ್ವಾನುಮತಿಯನ್ನು ಪಡೆಯದೆ ಹೊರತು ಯಾವುದೇ ಹೊಸ ಕೋರ್ಸ್/ಭಾಷಾ ವಿಷಯ/ಹೆಚ್ಚುವರಿ ಪ್ರವೇಶಾತಿ ಸಂಖ್ಯೆ ಹಾಗೂ ವಿದ್ಯಾರ್ಥಿ ಪ್ರಮಾಣದ ಹೆಚ್ಚಳಕ್ಕೆ ಸಂಯೋಜನೆ ಕೋರಿ ಅರ್ಜಿ ಸಲ್ಲಿಸುವಂತಿಲ್ಲ. ಸರ್ಕಾರದ ಅನುಮತಿ ಇಲ್ಲದೆ ಸಲ್ಲಿಸುವ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ. ಮುಂದುವರಿಕೆ ಸಂಯೋಜನೆಗಾಗಿ ಅರ್ಜಿ ಸಲ್ಲಿಸುವಾಗ ಪ್ರಸ್ತುತ ಮಂಜೂರಾಗಿರುವ ಕೋರ್ಸ್, ಭಾಷಾ ವಿಷಯ, ಐಚ್ಛಿಕ ವಿಷಯ ಸಮೂಹ ಹಾಗೂ ಪ್ರವೇಶ ಮಿತಿಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಸಂಪೂರ್ಣವಾಗಿ ಪರಿಶೀಲಿಸಿ ಅರ್ಜಿಯಲ್ಲಿ ನಮೂದಿಸಬೇಕು.

07. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಯವರು ನಡೆಸುವ ಕಾಲೇಜುಗಳು ನಿಗದಿತ ಸಂಯೋಜನಾ ಶುಲ್ಕದಲ್ಲಿ ಶೇಕಡಾ 50ರಷ್ಟು ಮಾತ್ರ ಪಾವತಿಸಬಹುದಾಗಿದೆ. (ಅಭಿವೃದ್ಧಿ ಮತ್ತು ಸೇವಾ ಶುಲ್ಕವನ್ನು ಪೂರ್ಣವಾಗಿ ಪಾವತಿಸತಕ್ಕದ್ದು) ಇದಕ್ಕೆ ಪೂರಕವಾಗಿ ಸಂಬಂಧಿಸಿದ ಇಲಾಖೆಯಿಂದ

ಪಡೆದಿರುವ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಅಂತಹ ಪ್ರಮಾಣಪತ್ರ ಸಲ್ಲಿಸದಿದ್ದಲ್ಲಿ ಅಂತಹ ಅರ್ಜಿಗಳನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅರ್ಜಿಗಳೆಂದು ಪರಿಗಣಿಸಲಾಗುವುದಿಲ್ಲ.

**ಸಂಯೋಜನಾ ಶುಲ್ಕದ ಮಾಹಿತಿಯನ್ನು ಸಂಯೋಜನಾ ಅರ್ಜಿಯ ಜೊತೆ ಒದಗಿಸಲಾಗುವುದು. ಹೆಚ್ಚಿನ ಮಾಹಿತಿಗಳನ್ನು ವಿಶ್ವವಿದ್ಯಾಲಯದ *http://davangereuniversity.ac.in* ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ.**

08. ಶಾಶ್ವತ ಸಂಯೋಜನೆ ಹೊಂದಿರುವ ಕಾಲೇಜುಗಳು ಈಗಾಗಲೇ ಶಾಶ್ವತ ಸಂಯೋಜನೆ ಪಡೆದ ಪದವಿ ಕೋರ್ಸ್‌ಗಳ ಐಚ್ಛಿಕ ವಿಷಯ/ಭಾಷಾ ವಿಷಯಗಳಲ್ಲಿ ತಾತ್ಕಾಲಿಕ ಸಂಯೋಜನೆ (Temporary Affiliation) ಪಡೆದಿದ್ದಲ್ಲಿ ಅವುಗಳ ಮುಂದುವರಿಕೆ/ಶಾಶ್ವತ ಸಂಯೋಜನೆಗಾಗಿ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸತಕ್ಕದು.

09. ಸಂಯೋಜನಾ ಅರ್ಜಿಯಲ್ಲಿ ನಮೂದಿಸಿರುವ ಕೋರ್ಸ್, ಐಚ್ಛಿಕ ವಿಷಯ ಮತ್ತು ಭಾಷಾ ವಿಷಯಗಳನ್ನು ಹೊರತುಪಡಿಸಿ ಇತರೆ ವಿಷಯಗಳಿಗಾಗಿ ಸ್ಥಳೀಯ ತಪಾಸಣಾ ಸಮಿತಿ ಕಾಲೇಜಿಗೆ ಭೇಟಿ ನೀಡುವ ಸಂದರ್ಭದಲ್ಲಿ ಅಥವಾ ನಂತರದ ಸಂದರ್ಭದಲ್ಲಿ ಸಲ್ಲಿಸುವ ಕೋರಿಕೆಯನ್ನು ಪರಿಗಣಿಸಲಾಗುವುದಿಲ್ಲ.

10. ಯು.ಜಿ.ಸಿ. ಸರ್ಕಾರ ಹಾಗೂ ವಿಶ್ವವಿದ್ಯಾನಿಲಯ ಸಂಯೋಜನೆಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಹೊರಡಿಸುವ ನೀತಿ ಸಂಹಿತೆಗಳನ್ನು/ನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು.

11. ನಿಗದಿತ ಸಂಯೋಜನಾ ಅರ್ಜಿ ಶುಲ್ಕ ರೂ.2,800-00 (ರೂಪಾಯಿ ಎರಡು ಸಾವಿರ ಎಂಟು ನೂರು ಮಾತ್ರ) ಗಳನ್ನು ಮತ್ತು ಸಂಬಂಧಪಟ್ಟ ಸಂಯೋಜನಾ ಶುಲ್ಕಗಳನ್ನು ರಾಷ್ಟ್ರೀಯ ತಂತ್ರಾಂಶದ ಹಣ ವರ್ಗಾವಣೆ (National Electronic Fund Transfer – NEFT) ಮೂಲಕ "ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ-577 002" ಇವರಿಗೆ ಸಂದಾಯವಾಗುವಂತೆ, ಸಂಯೋಜನಾ ಖಾತೆ ಸಂಖ್ಯೆ 64050645885ಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ದಾವಣಗೆರೆ ವಿಶ್ವವಿದ್ಯಾನಿಲಯ ಕ್ಯಾಂಪಸ್, ಶಿವಗಂಗೋತ್ರಿ, ದಾವಣಗೆರೆ – 577 002 (IFSC Code No.SBIN0040869)ಬ್ಯಾಂಕ್ ಖಾತೆಗೆ ಜಮೆ ಮಾಡಲು ಸೂಚಿಸಲಾಗಿದೆ.

12. ಭರ್ತಿ ಮಾಡಿದ **ಆನ್‌ಲೈನ್ ಮತ್ತು ಮ್ಯಾನ್ಯುಯಲ್** ಅರ್ಜಿಗಳನ್ನು ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ – 577 002 – ಇವರ ಕಛೇರಿಗೆ ಸಲ್ಲಿಸತಕ್ಕದ್ದು.

13. ಭರ್ತಿ ಮಾಡಿದ ಅರ್ಜಿಗಳನ್ನು ಈ ಕೆಳಕಂಡ ದಿನಾಂಕಗಳ ಒಳಗಾಗಿ ಸಲ್ಲಿಸಲು ಸೂಚಿಸಲಾಗಿದೆ.

| | | | |
|---|---|---|---|
| 1. | ದಂಡ ಶುಲ್ಕವಿಲ್ಲದೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | : | **04.10.2017** |
| 2. | ರೂ.17,000=00 ದಂಡ ಶುಲ್ಕದೊಡನೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | : | **19.10.2017** |
| 3. | ರೂ.20,000=00 ದಂಡ ಶುಲ್ಕದೊಡನೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | : | **31.10.2017** |

ಮೇಲ್ಕಂಡ ದಿನಾಂಕಗಳ ನಂತರ ಸಲ್ಲಿಸುವ ಅರ್ಜಿಗಳನ್ನು ಯಾವುದೇ ಕಾರಣಕ್ಕಾಗಿ ಪರಿಗಣಿಸುವುದಿಲ್ಲ.

**ಆದೇಶಾನುಸಾರ,**

**ಕುಲಸಚಿವರು**

ಗೆ,
ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳ ಎಲ್ಲಾ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ,

ಪ್ರತಿಗಳು:

1) ಮಾನ್ಯ ಕುಲಪತಿ/ಕುಲಸಚಿವ/ಕುಲಸಚಿವ(ಪ)/ಹಣಕಾಸು ಅಧಿಕಾರಿಗಳ ಆಪ್ತ ಕಾರ್ಯಾಲಯ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು), ಕರ್ನಾಟಕ ಸರ್ಕಾರ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಡಾ|| ಅಂಬೇಡ್ಕರ್ ವೀಧಿ, ಬೆಂಗಳೂರು–560 001.
3) ಆಯುಕ್ತರು / ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
4) ಜಂಟಿ ನಿರ್ದೇಶಕರು, ಪ್ರಾದೇಶಿಕ ಕಾಲೇಜು ಶಿಕ್ಷಣ ಇಲಾಖೆ, ಸಹ್ಯಾದ್ರಿ ಕಾಲೇಜು ಆವರಣ, ವಿದ್ಯಾನಗರ, ಶಿವಮೊಗ್ಗ.
5) ಉಪಕುಲಸಚಿವರು, ಶೈಕ್ಷಣಿಕ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ
6) ನಿಲಯದ ನಿರ್ದೇಶಕರು, ಆಕಾಶವಾಣಿ, ಭದ್ರಾವತಿ – ಈ ಪ್ರಕಟಣೆಯ ಸಾರಾಂಶವನ್ನು ಸುದ್ಧಿರೂಪದಲ್ಲಿ ಬಿತ್ತರಿಸಲು ಕೋರಲಾಗಿದೆ.
7) ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳು, ಜಿಲ್ಲಾ ವಾರ್ತಾ ಮತ್ತು ಪ್ರಚಾರ ಇಲಾಖೆ, ದಾವಣಗೆರೆ / ಚಿತ್ರದುರ್ಗ ಜಿಲ್ಲೆ – ಈ ಪ್ರಕಟಣೆಯ ಸಾರಾಂಶವನ್ನು ಸುದ್ಧಿರೂಪದಲ್ಲಿ ಪ್ರಕಟಿಸಲು ಕೋರಲಾಗಿದೆ.
8) ಕುಲಸಚಿವರು–ಕುವೆಂಪು ವಿಶ್ವವಿದ್ಯಾನಿಲಯ/ಮೈಸೂರು ವಿಶ್ವವಿದ್ಯಾನಿಲಯ/ಮಂಗಳೂರು ವಿಶ್ವವಿದ್ಯಾನಿಲಯ/ ತುಮಕೂರು ವಿಶ್ವವಿದ್ಯಾನಿಲಯ/ ಬೆಂಗಳೂರು ವಿಶ್ವವಿದ್ಯಾನಿಲಯ/ ಕರ್ನಾಟಕ ವಿಶ್ವವಿದ್ಯಾನಿಲಯ/ ಗುಲ್ಬರ್ಗಾ ವಿಶ್ವವಿದ್ಯಾನಿಲಯ/ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾನಿಲಯ/ ರಾಣಿಚೆನ್ನಮ್ಮ ವಿಶ್ವವಿದ್ಯಾನಿಲಯ/ ಕನ್ನಡ ವಿಶ್ವವಿದ್ಯಾನಿಲಯ
9) ಸಂಯೋಜನಾಧಿಕಾರಿಗಳು, ಐ.ಸಿ.ಟಿ. ಸೆಲ್, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ – ಸದರಿ ವಿಷಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಲಾಗಿದೆ.
10) ಕಛೇರಿ ಪ್ರತಿ.

# DAVANGERE UNIVERSITY

**College Development Council, Shivagangothri, Davangere – 577 002, Karnataka.**

☎: 08192-208309, E-mail: cdcdu2013@gmail.com


**No: DU/CDC/Affn. / 803(3384) CDC2017/** **Date: 01.09.2017**

## NOTIFICATION

Sub : Inviting application for Affiliation for the Academic Year 2018-19.

Ref : Approval of the Hon'ble Vice-Chancellor, Dated: 02.08.2017.

Applications are invited from the Registered Educational Trusts/ Institutions/ Organisations/ Societies located in (Davangere & Chitradurga District) Davangere University jurisdiction which are financially viable to start new colleges from the academic year 2018-19 in the disciplines of Arts, Science, Commerce & Management, Education, Physical Education and non-conventional Degree Courses from the Academic Year 2018-19, without expecting the Grants, either from the State Government/University

**Applications are also invited from the existing affiliated colleges of this University jurisdiction in the prescribed proforma in duplicate seeking renewal of temporary affiliation for the existing courses; seeking permanent affiliation for existing temporary affiliation; for extension of Degree or Post-Graduate Degree Courses; New Combinations; New Languages and for the grant of additional intake of students for the academic year 2018-19.**

The colleges seeking affiliation shall submit their application through **online & manual** for the year 2018-19

**The other details are as follows;**

1. The application for seeking fresh affiliation to start B.Ed and B.P.Ed colleges can be submitted by Registered Educational Trust/ Institutions/Organizations only after obtaining prior approval of NCTE or from such other competitive authorities and NOC from the affiliating University strictly following the rules/regulations prescribed by it.

2. The Principals of the existing affiliated colleges shall only submit application for Renewal Affiliation to the New Courses / New Optionals, for which institution of such Courses/Optionals only as per University Regulations.

3. The existing colleges that have temporary affiliation for a continuous period of FIVE years and have fulfilled the conditions laid down by the Local Inquiry Committee and achieved the Academic and Administrative standards prescribed by the University and having NAAC accreditation (Minimum 'C' Grade) may submit their application seeking for permanent affiliation.

4. The Colleges desirous to start Post-Graduate Programmes can submit application in duplicate for the year 2018-19. Such colleges should have permanent affiliation of the University and should have 04 Permanent faculties out of which 02 must posess Ph.D. Degree as prescribed by the UGC. And also that they should be exclusively appointed to teach P.G. Programme. ***They should not be allowed to teach Under-Graduate Programme.*** In addition to the PG programme the College should also provide adequate infrastructure facilities for Research Programmes as stipulated by the UGC/State Government. Such colleges may submit application in duplicate seeking for P.G. Programme.

5. While submitting application for seeking fresh affiliation, the Registered Trust/ Institutions/Organizations should enclose the following documents along with the application:

   5.1. Copy of the Registration Certificate of the Education Society.
   5.2. Copy of the Memorandum & Articles of Association, Rules, Regulation and Bye-law.
   5.3. In case of a trust, a copy of the Trust Deed and evidence for having registered the same as per rules.
   5.4. Latest Audit Report of the Education Society/Trust.
   5.5. Audit Report of the College.
   5.6. Annual Report of the Previous Year.
   5.7. Place in which proposed college is to be located and its suitability (enclose building plan etc.)
   5.8. In case of SC / ST Management a certificate to that effect issued by the Competent Authority.
   5.9. An undertaking (affidavit) on a Non-Judicial stamp paper of Rs.100=00 (Rupees one hundred only) stamp paper duly certified by Notary should be submitted stating that the college will comply with all provisions of the Act, Statutes, Regulations, Ordinance, Guidelines issued from time to time either by the Government / University.

6. The Principals of Government Colleges are strictly instructed to get prior approval of the Government to start New Courses/ Subjects/ Languages and for additional intake, otherwise such requests will not be considered. Further, they are instructed to submit their application furnishing information for continuation of affiliation in the prescribed form without fail. In case of additional sections, new combinations, languages, increase of intake etc., such requirements should be thoroughly checked and mentioned clearly in the application for sanction of affiliation. No requests on above issues will be entertained after affiliation committee approvals for the Academic Year.

7. Fifty Percent (50%) concession in Affiliation Fee will be given to the Colleges run by the SC/ST Management. (Development Fee and Service Fee shall be fully paid) Such Organizations/ Trusts should submit a certificate issued by the Competent Authority stating that their Organization/ Trust belongs to SC/ST Management. Those who fail to submit such certificate, their application will not be considered under SC/ST category.

The details of Affiliation Fees, other instructions and informations will be furnished along with the application. The additional informations can be obtained from the University website ***http://davangereuniversity.ac.in***

8. Permanently Affiliated Colleges which are also having temporary affiliation for some degree courses/ optional subjects/ languages shall apply separately for inclusion of those subjects under permanent affiliation.

9. The Languages, Optional Subjects and Degree Courses other than those mentioned in the application, will not be considered under any circumstances either at the time of LIC visit or at a later stage.

10. The guidelines and regulations pertaining to affiliation issued by the UGC, the State Government and the University should be strictly adhered to.

11. The prescribed application fee of Rs.2,800=00 (Rupees two thousand eight hundred only) and concerned affiliation fees, should be remitted to Affiliation Account No.64050645885 through National Electronic Fund Transfer (NEFT) to the State Bank of India, Davangere University Campus, Shivagangothri, Davangere – 577 002 (IFSC Code No.SBIN0040869)

mentioning as affiliation fee drawn in favour of "The Finance Officer, Davangere University, Shivagangothri, Davangere.

**12.** The filled in Online & Manual applications shall be submitted to the Registrar, Davangere University, Shivagangothri, Davangere – 577 002, either in person or by Registered Post.

**13.** The l**ast dates for submission of completed applications are as follows:**

| | | | |
|---|---|---|---|
| 1. | Without penal fee | : | 04.10.2017 |
| 2. | With penal fee of Rs.17,000=00 | : | 19.10.2017 |
| 3. | With penal fee of Rs.20,000=00 | : | 31.10.2017 |

Applications sent after the scheduled last date as mentioned above, will not be considered under any circumstance.

By order,

REGISTRAR

To,
The Principals of all Affiliated Colleges of Davangere and Chitradurga Districts.

Copy to:

1. P.A.'s to Hon'ble Vice-Chancellor / Registrar / Registrar (Evaluation) / Finance Officer, Davangere University, Shivagangothri, Davangere – 577 002.
2. Principal Secretary, Department of Higher Education (University), Government of Kaqrnataka M.S. Building, Dr. Ambedkar Veedhi, Bengaluru – 560 001.
3. Commissioner / Director, Department of Collegiate Education, Palace Road, Bengaluru.
4. Joint Director, Department of Collegiate Education, Sahyadri College Campus, Vidyanagar, Shimoga.
5. Deputy Registrar, Academic Section, Davangere University, Shivagangothri, Davangere.
6. Regional Director, Akashavani, Bhadravathi.
7. District Information Officer, District Information Office, Davangere / Chitradurga Dist.
8. Registrar, Kuvempu University/ University of Mysore/ Mangalore University/ Gulbarga University/ Vijayanagar Sri Krishnadevaraya University/ Rani Channamma University/ Kannada University
9. Co-ordinator, ICT Cell, Davangere University, Shivagangothri, Davangere – 577 002 – for upload in University website.
10. Office copy.

# ಸಂಯೋಜನಾ ಅರ್ಜಿ ಸಲ್ಲಿಸಲು ಸೂಚನೆಗಳು

## 2018–19ನೇ ಶೈಕ್ಷಣಿಕ ಸಾಲಿನಲ್ಲಿ ಹೊಸ ಕಾಲೇಜು ಹಾಗೂ ಹೊಸ ಭಾಷೆ/ಐಚ್ಚಿಕ ವಿಷಯ/ಪದವಿಗಳ ನವೀನ ಸಂಯೋಜನೆಗೆ ಮತ್ತು ಮುಂದುವರಿಕೆ ಸಂಯೋಜನೆಗೆ ಅರ್ಜಿ ಸಲ್ಲಿಸುವ ಸಂಸ್ಥೆ/ಕಾಲೇಜುಗಳು ಅನುಸರಿಸಬೇಕಾದ ಸೂಚನೆಗಳು

***

1. ಹೊಸ ಕಾಲೇಜಿನ ನವೀನ ಸಂಯೋಜನೆಗೆ ಅರ್ಜಿಯನ್ನು (ದ್ವಿಪ್ರತಿಯಲ್ಲಿ) ಅನ್‌ಲೈನ್ ಮತ್ತು ಆಫ್‌ಲೈನ್ ಮೂಲಕ ಸಂಸ್ಥೆಯ ಅಧ್ಯಕ್ಷರು ಅಥವಾ ಕಾರ್ಯದರ್ಶಿಗಳು ಸಲ್ಲಿಸಬೇಕು. ಹೊಸ ಭಾಷೆ/ಐಚ್ಚಿಕ ವಿಷಯ/ ಪದವಿಗಳ ನವೀನ ಸಂಯೋಜನೆ ಹಾಗೂ ಮುಂದುವರಿಕೆ ಸಂಯೋಜನೆ ಅರ್ಜಿಯನ್ನು (ದ್ವಿ ಪ್ರತಿಯಲ್ಲಿ) ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರು ಸಲ್ಲಿಸಬೇಕು.

| | | | |
|---|---|---|---|
| 1. | ದಂಡ ಶುಲ್ಕವಿಲ್ಲದೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | : | **04.10.2017** |
| 2. | ರೂ.17,000=00 ದಂಡ ಶುಲ್ಕದೊಡನೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | : | **19.10.2017** |
| 3. | ರೂ.20,000=00 ದಂಡ ಶುಲ್ಕದೊಡನೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | : | **31.10.2017** |

2. ಅರ್ಜಿಯಲ್ಲಿ ಕೇಳಿರುವ ಮಾಹಿತಿಯನ್ನು ಸ್ಪಷ್ಟವಾಗಿ ಮತ್ತು ವಿವರವಾಗಿ ಒದಗಿಸಬೇಕು. ಸ್ಥಳಾವಕಾಶ ಕಡಿಮೆ ಇದ್ದಲ್ಲಿ ವಿವರವಾದ ಮಾಹಿತಿಯ ಪಟ್ಟಿಯನ್ನು ಅರ್ಜಿಗೆ ಲಗತ್ತಿಸಬೇಕು.

3. ಮುಂದುವರಿಕೆ ಸಂಯೋಜನೆ ಬಯಸಿರುವ ಭಾಷೆ/ಐಚ್ಚಿಕ ವಿಷಯ/ವೃತ್ತಿಪರ ವಿಷಯ/ವಿಷಯ ಸಮೂಹ/ ಪದವಿಗಳ ಪೂರ್ಣ ವಿವರವನ್ನು ಅರ್ಜಿಯಲ್ಲಿ ಸರಿಯಾಗಿ ನಮೂದಿಸಬೇಕು. ಕಳೆದ ವರ್ಷಗಳಲ್ಲಿ ಭಾಷೆ/ ಐಚ್ಚಿಕ ವಿಷಯ/ವೃತ್ತಿಪರ ವಿಷಯ/ವಿಷಯ ಸಮೂಹ/ಪದವಿಗಳನ್ನು ಬೋಧಿಸಲು ವಿಶ್ವವಿದ್ಯಾನಿಲಯದಿಂದ ಮಾನ್ಯತೆ ದೊರೆತಿದ್ದು, ಅವುಗಳನ್ನು ಕಾಲೇಜಿನಲ್ಲಿ ಕಾರಣಾಂತರದಿಂದ ಬೋಧಿಸದಿದ್ದರೆ ಅಂತಹ ಭಾಷೆ/ ಐಚ್ಚಿಕ ವಿಷಯ/ವೃತ್ತಿಪರ ವಿಷಯ/ವಿಷಯ ಸಮೂಹ/ಪದವಿಗಳನ್ನು ಸಹ ಅರ್ಜಿಯಲ್ಲಿ ನಮೂದಿಸಬೇಕು.

4. ಶಾಶ್ವತ ಸಂಯೋಜನೆ ಪಡೆದ ಕಾಲೇಜುಗಳು, ಯಾವುದೇ ಭಾಷೆ/ಐಚ್ಚಿಕ ವಿಷಯ/ವೃತ್ತಿಪರ ವಿಷಯ/ವಿಷಯ ಸಮೂಹ/ಪದವಿಗಳಿಗೆ, ಮುಂದುವರಿಕೆ ಸಂಯೋಜನೆ ಪಡೆದಿದ್ದರೆ, ಅಂತಹ ಭಾಷೆ/ಐಚ್ಚಿಕ ವಿಷಯ/ ವೃತ್ತಿಪರ ವಿಷಯ/ವಿಷಯ ಸಮೂಹ/ಪದವಿಗಳ ಮುಂದುವರಿಕೆ ಸಂಯೋಜನೆಗಾಗಿ ನಿಗದಿತ ಶುಲ್ಕದೊಂದಿಗೆ ಅರ್ಜಿ ಸಲ್ಲಿಸತಕ್ಕದ್ದು.

5. ವಿಶ್ವವಿದ್ಯಾನಿಲಯದ ಅನುಮೋದಿತ ಪಟ್ಟಿಯಲ್ಲಿರುವ ವಿಷಯ ಸಮೂಹಗಳಿಗೆ ಮಾತ್ರ ಅನುಮತಿ ಕೋರತಕ್ಕದ್ದು.

6. ಅಪೂರ್ಣ ಅರ್ಜಿಗಳನ್ನು ಹಾಗೂ ಸಂಯೋಜನೆ ಶುಲ್ಕದ ಚಲನ್ ಪ್ರತಿಗಳನ್ನು ಸಲ್ಲಿಸದಿರುವ ಅಥವಾ ಕಡಿಮೆ ಶುಲ್ಕ ಪಾವತಿಸುವ ಕಾಲೇಜು/ಸಂಸ್ಥೆಗಳ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

7. ನಿಗದಿತ ಸಂಯೋಜನಾ ಅರ್ಜಿ ಶುಲ್ಕ ರೂ.2,800–00 (ರೂಪಾಯಿ ಎರಡು ಸಾವಿರ ಎಂಟು ನೂರು ಮಾತ್ರ) ಗಳನ್ನು ಮತ್ತು ಸಂಬಂಧಪಟ್ಟ ಸಂಯೋಜನಾ ಶುಲ್ಕಗಳನ್ನು ರಾಷ್ಟ್ರೀಯ ತಂತ್ರಾಂಶದ ಹಣ ವರ್ಗಾವಣೆ (National Electronic Fund Transfer – NEFT) ಮೂಲಕ "ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ–577 002" ಇವರಿಗೆ ಸಂದಾಯವಾಗುವಂತೆ, ಸಂಯೋಜನಾ ಖಾತೆ ಸಂಖ್ಯೆ 64050645885ಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ದಾವಣಗೆರೆ ವಿಶ್ವವಿದ್ಯಾನಿಲಯ ಕ್ಯಾಂಪಸ್, ಶಿವಗಂಗೋತ್ರಿ, ದಾವಣಗೆರೆ – 577 002 (IFSC Code No.SBIN0040869) ಬ್ಯಾಂಕ್ ಖಾತೆಗೆ ಜಮೆ ಮಾಡಲು ಸೂಚಿಸಲಾಗಿದೆ. ಸಂಯೋಜನೆ ಶುಲ್ಕಗಳನ್ನು ಪಾವತಿಸಿದ ಒಂದು ಪ್ರತಿಯನ್ನು ಅರ್ಜಿಯೊಂದಿಗೆ ಕಡ್ಡಾಯವಾಗಿ ಲಗತ್ತಿಸತಕ್ಕದ್ದು.

8. ಸಂಯೋಜನೆ ಅರ್ಜಿಗಳನ್ನು ಸ್ವೀಕರಿಸಿದ ನಂತರ, ವಿಶ್ವವಿದ್ಯಾನಿಲಯದ ಸ್ಥಳೀಯ ತಪಾಸಣಾ ಸಮಿತಿಯು ಸದರಿ ಸಂಸ್ಥೆ/ಕಾಲೇಜಿನ ತಪಾಸಣೆ ಕೈಗೊಂಡು ಭೌತಿಕ ಮತ್ತು ಶೈಕ್ಷಣಿಕ ಸೌಲಭ್ಯಗಳನ್ನು ಪರಿಶೀಲಿಸಿ ವರದಿ ಸಲ್ಲಿಸುವುದು. ಸದರಿ ವರದಿಯನ್ನು ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳಾದ ಶಿಕ್ಷಣ ಮಂಡಳಿ ಹಾಗೂ ಸಿಂಡಿಕೇಟ್ ಸಭೆಗೆ ಮಂಡಿಸಿ ಅವುಗಳ ನಿರ್ಣಯದ ಮೇಲೆ ಮುಂದಿನ ಕ್ರಮಕ್ಕೈಗೊಳ್ಳಲಾಗುವುದು. ಹೊಸ ಕಾಲೇಜು ಹಾಗೂ ಹೊಸ:ಭಾಷೆ/ಐಚ್ಚಿಕ ವಿಷಯ/ ವಿಷಯ ಸಮೂಹ/ ಪದವಿಗಳ ನವೀನ ಸಂಯೋಜನೆಗೆ ಮೇಲ್ಕಂಡ ಪ್ರಾಧಿಕಾರಗಳ ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಸರ್ಕಾರದ ಶಿಫಾರಸ್ಸಿನಂತೆ ಮುಂದಿನ ಕ್ರಮಕ್ಕೈಗೊಳ್ಳಲಾಗುವುದು.

9. ವಿಶ್ವವಿದ್ಯಾನಿಲಯದ ಸ್ಪಷ್ಟ ಮಂಜೂರಾತಿ/ಮಾನ್ಯತೆ ಇಲ್ಲದೆ, ಹೊಸ:ಕಾಲೇಜು:ಭಾಷೆ:ಐಚ್ಛಿಕ ವಿಷಯ: ವಿಷಯ ಸಮೂಹ:ಪದವಿಗಳನ್ನು ಪ್ರಾರಂಭಿಸಬಾರದು ಮತ್ತು ಮುಂದುವರಿಸಬಾರದು. ವಿಶ್ವವಿದ್ಯಾನಿಲಯದ ಪೂರ್ವಾನುಮತಿ ಇಲ್ಲದೆ ಸಂಯೋಜನೆ ಆದೇಶದಲ್ಲಿ ನಮೂದಿಸಿರುವುದಕ್ಕೆ ಯಾವುದೇ ಬದಲಾವಣೆಯನ್ನು ಮಾಡಿಕೊಳ್ಳಬಾರದು.

10. ಯಾವುದೇ ಭಾಷೆ/ಐಚ್ಛಿಕ ವಿಷಯ/ ವಿಷಯ ಸಮೂಹ/ ಪದವಿಗಳಿಗೆ ಕಾಲೇಜಿನಲ್ಲಿ ಬೋಧನಾ ಕಾರ್ಯ ನಡೆಸದೇ ಇದ್ದರೆ ಅಥವಾ ವಿದ್ಯಾರ್ಥಿಗಳೇ ಸ್ವಂತ ಜವಾಬ್ದಾರಿಯ ಮೇಲೆ ಓದಿಕೊಳ್ಳುವುದಾದರೆ, ಅಂತಹ ಭಾಷೆ/ ಐಚ್ಛಿಕ ವಿಷಯ/ ವಿಷಯ ಸಮೂಹ/ ಪದವಿಗಳಿಗೂ ಸಹ ನವೀನ/ಮುಂದುವರಿಕೆ ಸಂಯೋಜನೆಯನ್ನು ಕಡ್ಡಾಯವಾಗಿ ಪಡೆಯತಕ್ಕದ್ದು.

11. ಚಾಲ್ತಿಯಲ್ಲಿರುವ ಭಾಷೆ/ಐಚ್ಛಿಕ ವಿಷಯ/ ವಿಷಯ ಸಮೂಹ/ ಪದವಿಗಳ ವಿವರಗಳನ್ನು ಅರ್ಜಿಯಲ್ಲಿ ತಪ್ಪದೇ ಸರಿಯಾಗಿ ನಮೂದಿಸಬೇಕು. ಒಂದು ವೇಳೆ ಚಾಲ್ತಿಯಲ್ಲಿರುವ ಯಾವುದೇ ಭಾಷೆ/ಐಚ್ಛಿಕ ವಿಷಯ/ವಿಷಯ ಸಮೂಹ/ಪದವಿಗಳನ್ನು ಅರ್ಜಿಯಲ್ಲಿ ನಮೂದಿಸದೇ ಇದ್ದಲ್ಲಿ, ಅಂತಹ ಭಾಷೆ/ಐಚ್ಛಿಕ ವಿಷಯ/ ವಿಷಯ ಸಮೂಹ/ ಪದವಿಗಳನ್ನು ನವೀನ ಸಂಯೋಜನೆಗೆಂದು ಪರಿಗಣಿಸಿ ಅದಕ್ಕೆ ಸಂಬಂಧಪಟ್ಟ ಶುಲ್ಕವನ್ನು ವಿಧಿಸಲಾಗುವುದು. ಅದ ಕಾರಣ, ಅರ್ಜಿಯನ್ನು ಸರಿಯಾಗಿ ಪರಿಶೀಲಿಸಿ ಎಲ್ಲಾ ದಾಖಲೆಗಳೊಂದಿಗೆ ಸಲ್ಲಿಸುವುದು ಸಂಬಂಧಪಟ್ಟ ಪ್ರಾಂಶುಪಾಲರ ಕರ್ತವ್ಯ ಹಾಗೂ ಹೊಣೆಯಾಗಿದೆ.

12. ಮುಂದುವರಿಕೆ ಸಂಯೋಜನೆ ಅರ್ಜಿಯಲ್ಲಿ ಕಾಲೇಜಿನ ಪ್ರಾಂಶುಪಾಲರು, ಮುಂದಿನ ಶೈಕ್ಷಣಿಕ ಸಾಲಿನಲ್ಲಿ ಅಗತ್ಯವಿರುವ ಪ್ರವೇಶಮಿತಿ ಕುರಿತು ಅರ್ಜಿಯಲ್ಲಿ ನಮೂದಿಸಬೇಕು. ಪ್ರವೇಶ ಬಯಸಬಹುದಾದ ವಿದ್ಯಾರ್ಥಿಗಳ ಅಂದಾಜು ಪ್ರಮಾಣ ಮತ್ತು ಲಭ್ಯವಿರುವ ಶೈಕ್ಷಣಿಕ ಮೂಲಭೂತ ಸೌಲಭ್ಯದ ಅಧಾರದ ಮೇಲೆ ಪ್ರವೇಶದ ಮಿತಿಯನ್ನು ನಿಗದಿಪಡಿಸಲಾಗುವುದು. ವಿಶ್ವವಿದ್ಯಾನಿಲಯವು ನಿಗದಿಪಡಿಸಿದ ಪ್ರವೇಶಮಿತಿಗಿಂತ ಹೆಚ್ಚಿನ ಪ್ರವೇಶಮಿತಿ ಕೋರಿ ಕಾಲೇಜಿನವರು ಸಲ್ಲಿಸುವ ಪ್ರಸ್ತಾವನೆಯನ್ನು ಪರಿಗಣಿಸಲಾಗುವುದಿಲ್ಲ. ಕಾಲೇಜಿನವರು ಅಗತ್ಯವಿರುವ ಪ್ರವೇಶಮಿತಿ ಕುರಿತು ತಪಾಸಣಾ ಸಮಿತಿಗೆ ಮನವರಿಕೆ ಮಾಡಬೇಕು.

13. ವಿಶ್ವವಿದ್ಯಾನಿಲಯ ನಿಗದಿಪಡಿಸಿದ ಪ್ರವೇಶಮಿತಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ನೀಡಬಾರದು. ವಿಶ್ವವಿದ್ಯಾನಿಲಯದ ಪೂರ್ವಾನುಮತಿಯಿಲ್ಲದೆ ಪ್ರವೇಶ ನೀಡುವುದರಿಂದ ವಿದ್ಯಾರ್ಥಿಗಳಿಗೆ ಆಗುವ ತೊಂದರೆಗಳಿಗೆ ಕಾಲೇಜು/ಸಂಸ್ಥೆಯವರು ಹೊಣೆಗಾರರಾಗುತ್ತಾರೆ.

14. ವೃತ್ತಿಪರ ಕಾಲೇಜುಗಳ ಪ್ರವೇಶ ಮಿತಿ ನಿಗದಿಪಡಿಸುವಿಕೆಯು ಸರ್ಕಾರ ಹಾಗೂ ಸಂಬಂಧಿಸಿದ ಕೇಂದ್ರೀಯ ಪರಿಷತ್ತಿನ ಅನುಮೋದನೆಗೆ ಒಳಪಟ್ಟಿರುತ್ತದೆ.

15. ಸ್ನಾತಕೋತ್ತರ ಪದವಿ ಪ್ರಾರಂಭಿಸಲು ಅರ್ಜಿ ಸಲ್ಲಿಸುವ ಸಂಯೋಜಿತ ಕಾಲೇಜುಗಳು ಸ್ನಾತಕೋತ್ತರ ಕೋರ್ಸಿನ ಪ್ರಾರಂಭಕ್ಕಾಗಿ ವಿಶ್ವವಿದ್ಯಾಲಯ ನಿಗದಿಪಡಿಸಿರುವ ಎಲ್ಲಾ ಅರ್ಹತೆಗಳನ್ನು ಕಾಲೇಜು ಪಡೆದಿರುವ ಬಗ್ಗೆ ಖಚಿತಪಡಿಸಿಕೊಂಡು ನಿಗದಿತ ನಮೂನೆಯಲ್ಲಿ ದ್ವಿಪ್ರತಿಯಲ್ಲಿ ಅರ್ಜಿ ಸಲ್ಲಿಸಬೇಕು.

16. ಸಂಯೋಜಿತ ಕಾಲೇಜುಗಳಲ್ಲಿ ಸ್ನಾತಕೋತ್ತರ ಪದವಿ ಕೋರ್ಸ್‌ಗಳನ್ನು ಪ್ರಾರಂಭಿಸಲು ಉದ್ದೇಶಿಸಿರುವ ಕಾಲೇಜುಗಳು ನಿರಂತರ 05 ವರ್ಷ ಸಂಯೋಜನೆ ಪೂರೈಸಿರಬೇಕು. ಹೊಸದಾಗಿ ಪ್ರಾರಂಭಿಸಲು ಉದ್ದೇಶಿಸಿರುವ ಸ್ನಾತಕೋತ್ತರ ಪದವಿ ಕೋರ್ಸಿಗೆ ಸಂಬಂಧಿಸಿದ ವಿಷಯದಲ್ಲಿ ಯು.ಜಿ.ಸಿ/ಸರ್ಕಾರಿ ನಿಯಮಾವಳಿಯನ್ವಯ ಕನಿಷ್ಠ ನಾಲ್ವರು ಅಧ್ಯಾಪಕರನ್ನು ಹೊಂದಿದ್ದು, ಅವರುಗಳಿಗೆ ಸ್ನಾತಕೋತ್ತರ ವಿಷಯ ಬೋಧನೆಗೆ ಆದೇಶ ನೀಡಿರಬೇಕು. ಅಲ್ಲದೆ, ಅವರಲ್ಲಿ ಇಬ್ಬರು Ph.D. ಪದವಿ ಹೊಂದಿದವರಾಗಿಬೇಕು. ಸದರಿ ಅಧ್ಯಾಪಕರನ್ನು ಸ್ನಾತಕ ಪದವಿ ತರಗತಿಗಳಿಗೆ ಬೋಧನೆಗೆ ಅವಕಾಶ ನೀಡಿರಬಾರದು. ಸ್ನಾತಕೋತ್ತರ ವ್ಯಾಸಂಗದ ಜೊತೆಗೆ ಸಂಶೋಧನಾ ಕಾರ್ಯಕ್ಕಾಗಿ ವಿಶ್ವವಿದ್ಯಾನಿಲಯ ಮತ್ತು ಸರ್ಕಾರದ ಮಾರ್ಗಸೂಚಿಯನ್ವಯ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಹೊಂದಿರಬೇಕು. ಅಂತಹ ಸೌಲಭ್ಯವುಳ್ಳ ಕಾಲೇಜುಗಳು 2018-19ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕೋತ್ತರ ಪದವಿ ಕೋರ್ಸ್‌ಗಳನ್ನು ಪ್ರಾರಂಭಿಸಲು ದ್ವಿಪ್ರತಿಯಲ್ಲಿ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

17. ಸಂಯೋಜನೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿ/ವಿವರಣೆಯನ್ನು **"ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್ತು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ – 577 002", (ದೂರವಾಣಿ: 08192 – 208029, 208309)** ಇವರಿಂದ ಪಡೆಯಬಹುದು.

ಸಹಿ/-

ಕುಲಸಚಿವರು

# 2018–19ನೇ ಶೈಕ್ಷಣಿಕ ಸಾಲಿನಲ್ಲಿ ಶಾಶ್ವತ ಸಂಯೋಜನೆಗೆ ಅರ್ಜಿ ಸಲ್ಲಿಸುವ ಕಾಲೇಜುಗಳು ಅನುಸರಿಸಬೇಕಾದ ಸೂಚನೆಗಳು

1. ಶಾಶ್ವತ ಸಂಯೋಜನೆ ಅರ್ಜಿಯನ್ನು, ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರು ಸಲ್ಲಿಸಬೇಕು. ಅರ್ಜಿ ಸಲ್ಲಿಸುವುದಕ್ಕೂ ಮೊದಲು ಶಾಶ್ವತ ಸಂಯೋಜನೆ ಪಡೆಯಲು ವಿಶ್ವವಿದ್ಯಾಲಯ ನಿಗದಿಪಡಿಸಿದ ಎಲ್ಲಾ ಅರ್ಹತೆಗಳನ್ನು ಕಾಲೇಜು ಹೊಂದಿರುವ ಬಗ್ಗೆ ಖಚಿತಪಡಿಸಿಕೊಂಡು ಅರ್ಜಿ ಸಲ್ಲಿಸಬೇಕು. ಅರ್ಜಿಗಳನ್ನು ದ್ವಿಪ್ರತಿಯಲ್ಲಿ ಆನ್‌ಲೈನ್ ಮತ್ತು ಆಫ್‌ಲೈನ್ ಮೂಲಕ ನೋಂದಣಿ ಅಂಚೆಯ ಮೂಲಕ ನಿಗದಿತ ಕೊನೆಯ ದಿನಾಂಕದೊಳಗೆ **"ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ – 577 002"**, ಈ ವಿಳಾಸಕ್ಕೆ ಕಳುಹಿಸತಕ್ಕದ್ದು.
2. ಶಾಶ್ವತ ಸಂಯೋಜನೆ ಬಯಸಿರುವ ಪದವಿಗಳ ಪೂರ್ಣ ವಿವರವನ್ನು ಅರ್ಜಿಯಲ್ಲಿ ನಮೂದಿಸಬೇಕು. ಚಾಲ್ತಿಯಲ್ಲಿರುವ ಪದವಿ ಕೋರ್ಸ್/ಭಾಷೆಗಳು/ವಿಷಯಗಳು/ ವಿಷಯ ಸಮೂಹಗಳು/ ಪ್ರವೇಶ ಮಿತಿ ಮತ್ತು ವಿಭಾಗಗಳ ವಿವರಗಳನ್ನು ಅರ್ಜಿಯಲ್ಲಿ ತಪ್ಪದೆ ಸರಿಯಾಗಿ ನಮೂದಿಸಬೇಕು.
3. ನಿಗದಿತ ಸಂಯೋಜನಾ ಅರ್ಜಿ ಶುಲ್ಕ ರೂ.2,800–00 (ರೂಪಾಯಿ ಎರಡು ಸಾವಿರ ಎಂಟು ನೂರು ಮಾತ್ರ) ಗಳನ್ನು ಮತ್ತು ಸಂಬಂಧಪಟ್ಟ ಸಂಯೋಜನಾ ಶುಲ್ಕಗಳನ್ನು ರಾಷ್ಟ್ರೀಯ ತಂತ್ರಾಂಶದ ಹಣ ವರ್ಗಾವಣೆ (National Electronic Fund Transfer – NEFT) ಮೂಲಕ "ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ–577 002" ಇವರಿಗೆ ಸಂದಾಯವಾಗುವಂತೆ, ಸಂಯೋಜನಾ ಖಾತೆ ಸಂಖ್ಯೆ 64050645885ಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ದಾವಣಗೆರೆ ವಿಶ್ವವಿದ್ಯಾನಿಲಯ ಕ್ಯಾಂಪಸ್, ಶಿವಗಂಗೋತ್ರಿ, ದಾವಣಗೆರೆ – 577 002 (IFSC Code No.SBIN0040869) ಬ್ಯಾಂಕ್ ಖಾತೆಗೆ ಜಮೆ ಮಾಡಲು ಸೂಚಿಸಲಾಗಿದೆ. ಸಂಯೋಜನೆ ಶುಲ್ಕಗಳನ್ನು ಪಾವತಿಸಿದ ಒಂದು ಪ್ರತಿಯನ್ನು ಅರ್ಜಿಯೊಂದಿಗೆ ಕಡ್ಡಾಯವಾಗಿ ಲಗತ್ತಿಸತಕ್ಕದ್ದು.
4. ಕೆಲವು ಪದವಿ ಕೋರ್ಸ್/ವಿಷಯಗಳನ್ನು ಬೋಧಿಸಲು ವಿಶ್ವವಿದ್ಯಾನಿಲಯದ ಮಾನ್ಯತೆ ದೊರೆತಿದ್ದು, ಕಾಲೇಜಿನಲ್ಲಿ ಕಾರಣಾಂತರದಿಂದ ಬೋಧಿಸದಿದ್ದರೆ ಅಂತಹ ಪದವಿ:ವಿಷಯಗಳನ್ನು ಸಹ ಅರ್ಜಿಯಲ್ಲಿ ನಮೂದಿಸಬೇಕು. ಸ್ಥಳಾವಕಾಶ ಕಡಿಮೆ ಇದ್ದಲ್ಲಿ ವಿವರವಾದ ಮಾಹಿತಿಗಳನ್ನೊಳಗೊಂಡ ಪಟ್ಟಿಯನ್ನು ಅರ್ಜಿಗೆ ಲಗತ್ತಿಸಬೇಕು.
5. ಶಾಶ್ವತ ಸಂಯೋಜನೆಗಾಗಿ ಅರ್ಜಿಗಳನ್ನು ಸ್ವೀಕರಿಸಿದ ನಂತರ, ವಿಶ್ವವಿದ್ಯಾನಿಲಯವು ಕಾಲೇಜಿನಲ್ಲಿರುವ ಭೌತಿಕ ಮತ್ತು ಶೈಕ್ಷಣಿಕ ಸೌಲಭ್ಯಗಳನ್ನು ಪರಿಶೀಲಿಸಿ ವರದಿ ನೀಡಲು ಸ್ಥಳೀಯ ತಪಾಸಣಾ ಸಮಿತಿಯನ್ನು ಕಳುಹಿಸಲಾಗುವುದು. ಸ್ಥಳೀಯ ತಪಾಸಣಾ ಸಮಿತಿಯು ಸಲ್ಲಿಸುವ ಸಂಯೋಜನಾ ವರದಿಯನ್ನು ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳಾದ ಶಿಕ್ಷಣ ಮಂಡಳಿ ಮತ್ತು ಸಿಂಡಿಕೇಟ್ ಸಭೆಯ ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಕಳುಹಿಸಲಾಗುವುದು. ಸರ್ಕಾರದ ಶಿಫಾರಸ್ಸಿನನ್ವಯ ಮುಂದಿನ ಕ್ರಮ ಕೈಗೊಳ್ಳಲಾಗುವುದು.
6. ಶಿಕ್ಷಣ ನಿಕಾಯಗಳಿಗೆ ಶಾಶ್ವತ ಸಂಯೋಜನೆಗಾಗಿ ಅರ್ಜಿ ಸಲ್ಲಿಸ ಬಯಸುವ ಕಾಲೇಜುಗಳು ಸಂಬಂಧಪಟ್ಟ ಕೇಂದ್ರಿಯ ಪರಿಷತ್ತಿನ ಮಾನ್ಯತೆ ಪಡೆದಿರಬೇಕು ಹಾಗೂ ಪರಿಷತ್ತು ನಿಗದಿಪಡಿಸಿರುವ ಷರತ್ತುಗಳನ್ನು ಪೂರೈಸಿದಲ್ಲಿ ಮಾತ್ರ ಅರ್ಜಿಯನ್ನು ಪರಿಗಣಿಸಲಾಗುವುದು.
7. ಎಲ್ಲಾ ವಿಷಯಗಳನ್ನು ಬೋಧಿಸಲು ಯುಜಿಸಿ ನಿಗದಿಪಡಿಸಿರುವಂತಹ ಅರ್ಹತೆಗಳನ್ನು ಹೊಂದಿರುವ ಕನಿಷ್ಟ ಶೇ.75ರಷ್ಟು ಅಧ್ಯಾಪಕರುಗಳನ್ನು ಖಾಯಂ ನೇಮಕಾತಿ ಮಾಡಿರಬೇಕು. ಖಾಯಂ ಅಧ್ಯಾಪಕರ ಪಟ್ಟಿಯನ್ನು ಅವರಿಗೆ ನೀಡಿದ ಕಛೇರಿ ನೇಮಕಾತಿ ಆದೇಶಗಳೊಂದಿಗೆ, ಅವರ ಜನ್ಮ ದಿನಾಂಕ, ಸೇವೆಗೆ ಸೇರಿದ ದಿನಾಂಕ, ವಿದ್ಯಾರ್ಹತೆ ಇತ್ಯಾದಿಗಳನ್ನು ಅರ್ಜಿಯಲ್ಲಿ ನಮೂದಿಸಿರುವಂತೆ ಮಾಹಿತಿಗಳನ್ನು ಅರ್ಜಿಗೆ ಲಗತ್ತಿಸಬೇಕು.
8. ಶಾಶ್ವತ ಸಂಯೋಜನೆಗೆ ಅರ್ಜಿ ಸಲ್ಲಿಸಲು ಕಾಲೇಜುಗಳು ಕನಿಷ್ಠ ಪಕ್ಷ ಐದು ವರ್ಷಗಳ ಮುಂದುವರಿಕೆ ಸಂಯೋಜನೆಯನ್ನು ಪಡೆದಿರಬೇಕು. ಹಿಂದಿನ ಐದು ವರ್ಷಗಳ ಮುಂದುವರಿಕೆ ಸಂಯೋಜನಾ ಆದೇಶದ ಪ್ರತಿಯನ್ನು ಶಾಶ್ವತ ಸಂಯೋಜನಾ ಅರ್ಜಿಗೆ ಲಗತ್ತಿಸಬೇಕು. ಕಾಲೇಜು NAAC ನಿಂದ ಕನಿಷ್ಟ 'C' ಗ್ರೇಡ್ ಪಡೆದಿರಬೇಕು. NAAC ಮಾನ್ಯತೆ ಮೇಲೆ ಶಾಶ್ವತ ಸಂಯೋಜನೆ ನೀಡಲಾಗುವುದು. ಆದರೆ ಕಾಲೇಜು ಶಾಶ್ವತ ಸಂಯೋಜನೆ ಅರ್ಜಿ ಸಲ್ಲಿಸಿ ಪೂರ್ಣ ಶುಲ್ಕವನ್ನು ಪಾವತಿಸಬೇಕು.
9. ಶಾಶ್ವತ ಸಂಯೋಜನೆ ಮಂಜೂರಾಗುವವರೆಗೆ, ಕಾಲೇಜು ಮುಂದುವರಿಕೆ ಸಂಯೋಜನೆ ಪಡೆಯುವ ಸಲುವಾಗಿ ಅರ್ಜಿಯನ್ನು ಪ್ರತ್ಯೇಕವಾಗಿ ಸಲ್ಲಿಸಬೇಕು.
10. ಶಾಶ್ವತ ಸಂಯೋಜನೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿ:ವಿವರಣೆಗಳನ್ನು **"ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್ತು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ – 577 002"**, ಇಲ್ಲಿ ಪಡೆಯಬಹುದು.
11. ಅಪೂರ್ಣ ಅರ್ಜಿಗಳನ್ನು ಹಾಗೂ ಸಂಯೋಜನಾ ಶುಲ್ಕ ಪಾವತಿಸದಿರುವ ಅಥವಾ ಕಡಿಮೆ ಶುಲ್ಕ ಪಾವತಿಸಿ ಸಲ್ಲಿಸಿದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಸಹಿ/–

ಕುಲಸಚಿವರು

## ವಿಶೇಷ ಸೂಚನೆಗಳು

1. ಹೊಸ ಕಾಲೇಜು ಹಾಗೂ ಹಾಲಿ ಅಸ್ತಿತ್ವದಲ್ಲಿರುವ ಕಾಲೇಜುಗಳಲ್ಲಿ, ಹೊಸ:ಭಾಷೆ/ಐಚ್ಛಿಕ ವಿಷಯ/ ವೃತ್ತಿಪರ ವಿಷಯ/ವಿಷಯ ಸಮೂಹ/ಪದವಿಗಳನ್ನು ಪ್ರಾರಂಭಿಸಲು ಸಲ್ಲಿಸುವ ಪ್ರಸ್ತಾವನೆಯು "ನವೀನ ಸಂಯೋಜನೆ"ಯೆಂದು ಪರಿಗಣಿಸಲ್ಪಡುತ್ತದೆ.

2. ಸಂಯೋಜನೆ ಪಡೆದ ಕಾಲೇಜುಗಳಲ್ಲಿ, ಬೋಧಿಸುತ್ತಿರುವ ಭಾಷೆ/ಐಚ್ಛಿಕ ವಿಷಯ/ ವೃತ್ತಿಪರ ವಿಷಯ/ ಐಚ್ಛಿಕ ವಿಷಯ ಸಮೂಹ/ಪದವಿ ಕೋರ್ಸ್/ಹೆಚ್ಚುವರಿ ವಿಭಾಗಗಳನ್ನು, ಮುಂದುವರಿಸಿಕೊಂಡು ಹೋಗಲು ಸಲ್ಲಿಸುವ ಪ್ರಸ್ತಾವನೆಯು ಮುಂದುವರಿಕೆ ಸಂಯೋಜನೆಯೆಂದು ಪರಿಗಣಿಸಲ್ಪಡುತ್ತದೆ.

3. ಪ.ಜಾ:ಪ.ಪಂ. ಸಂಸ್ಥೆಗಳಿಗೆ ಸಂಯೋಜನೆ ಶುಲ್ಕ ಮತ್ತು ವಿಶ್ವವಿದ್ಯಾನಿಲಯದ ಅಭಿವೃದ್ಧಿ ಶುಲ್ಕದಲ್ಲಿ ಮಾತ್ರ ಶೇ.50ರಷ್ಟು ವಿನಾಯಿತಿ ನೀಡಲಾಗುತ್ತದೆ. ಆದರೆ, ಸೇವಾ ಶುಲ್ಕದಲ್ಲಿ ಯಾವುದೇ ರಿಯಾಯಿತಿ ಇರುವುದಿಲ್ಲ. ಈ ಬಗ್ಗೆ ಜಿಲ್ಲಾ ಸಂಘಗಳ ನೋದಣಾಧಿಕಾರಿಗಳ ದೃಢೀಕರಣ ಪತ್ರ ಸಲ್ಲಿಸದಿದ್ದಲ್ಲಿ, ಪೂರ್ಣ ಶುಲ್ಕ ಪಾವತಿಸತಕ್ಕದ್ದು.

4. ನವೀನ ಸಂಯೋಜನೆಗೆ ಅರ್ಜಿಗಳನ್ನು ಪರಿಗಣಿಸಿ, ವರದಿ ಪಡೆದು, ಶಿಫಾರಸ್ಸು ಮಾಡಿ ಅಥವಾ ಶಿಫಾರಸ್ಸು ಮಾಡದೇ, ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟಲ್ಲಿ, ಪಾವತಿಸಿದ ಯಾವುದೇ ಶುಲ್ಕವನ್ನು ಹಿಂಪಾವತಿಸಲಾಗುವುದಿಲ್ಲ.

5. ಸ್ಥಳೀಯ ತಪಾಸಣಾ ಸಮಿತಿಯ ಶಿಫಾರಸ್ಸಿನಂತೆ, ವಿಶ್ವವಿದ್ಯಾನಿಲಯವು ಹೊಸ ಭಾಷೆ/ವಿಷಯ/ಹೊಸ ಕೋರ್ಸ್ ಅಥವಾ ಮುಂದುವರಿಕೆ/ಶಾಶ್ವತ ಸಂಯೋಜನೆ ನೀಡದೆ ಇದ್ದಲ್ಲಿ, ಪಾವತಿಸಿದ ಯಾವುದೇ ಶುಲ್ಕವನ್ನು ಹಿಂಪಾವತಿಸಲಾಗುವುದಿಲ್ಲ.

6. ತಪಾಸಣಾ ಸಮಿತಿಯು ಭೇಟಿ ನೀಡುವ ಮುನ್ನ, ಸಂಯೋಜನೆ ಅರ್ಜಿಯನ್ನು ಸಂಸ್ಥೆ/ಕಾಲೇಜುಗಳು, ತಮ್ಮದೇ ಆದ ಕಾರಣಗಳಿಗಾಗಿ ಹಿಂತೆಗೆದುಕೊಂಡರೆ, ಒಟ್ಟು ಶುಲ್ಕದ 80%ರಷ್ಟು ಹಣವನ್ನು ಮಾತ್ರ ಹಿಂಪಾವತಿಸಲಾಗುವುದು.

7. ಕೊನೆಯ ದಿನಾಂಕದ ನಂತರ ಬರುವ ಅರ್ಜಿಗಳನ್ನು ತಿರಸ್ಕರಿಸಿದರೆ ಒಟ್ಟು ಶುಲ್ಕದ 90%ರಷ್ಟು ಶುಲ್ಕಗಳನ್ನು ಮಾತ್ರ ಹಿಂಪಾವತಿಸಲಾಗುವುದು.

8. ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ, ಶಿಕ್ಷಣ ಸಂಸ್ಥೆಗಳು ಕಡ್ಡಾಯವಾಗಿ ಟ್ರಸ್ಟ್ ಕಾಯ್ದೆ ಅಥವಾ ಸಂಘಗಳ ನೋಂದಣಿ ಕಾಯ್ದೆಯನ್ವಯ ನೋಂದಣಿಯಾಗಿದ್ದು, ಸಮಾಜದ ಎಲ್ಲಾ ವರ್ಗದವರನ್ನು ಒಳಗೊಂಡಿರತಕ್ಕದ್ದು.

9. ಕಾನೂನಿನನ್ವಯ ನೋಂದಣಿಯಾಗದ ಸಂಸ್ಥೆಗಳು, ನವೀನ/ಮುಂದುವರಿಕೆ ಸಂಯೋಜನೆಗೆ, ಸಲ್ಲಿಸುವ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.

ಸಹಿ/-
ಕುಲಸಚಿವರು